ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 20/5/2020

# ರಾಜ್ಯದಲ್ಲಿ ಒಂದೇ ದಿನ ಮೂರು ಸಾವು, 149 ಕೇಸ್
## 113 ಸೋಂಕಿತರು ಹೊರ ರಾಜ್ಯದಿಂದ ಬಂದವರು

# ಕರೊನಾ ಸ್ಫೋಟ!

20-5-2020

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದ ಕರೊನಾ ಸೋಂಕಿತರ ಸಂಖ್ಯೆ ಇನ್ನೊಂದು ವಾರದಲ್ಲಿ 2 ಸಾವಿರಕ್ಕೆ ಏರಿಕೆಯಾಗಲಿದೆ ಎಂದು ಆರೋಗ್ಯ ಇಲಾಖೆ ಅಂದಾಜಿಸಿದ ಬೆನ್ನಲ್ಲೇ ಮಂಗಳವಾರ ಕರ್ನಾಟಕದಲ್ಲಿ ಕರೊನಾ ಸ್ಫೋಟಿಸಿದೆ. ಒಂದೇ ದಿನ 149 ಹೊಸ ಪ್ರಕರಣಗಳು ದೃಢಪಟ್ಟು, ಮೂವರು ಮೃತಪಟ್ಟಿದ್ದಾರೆ. ಇದು ಈವರೆಗಿನ ಒಂದೇ ದಿನದಲ್ಲಿನ ಗರಿಷ್ಠ ಪ್ರಮಾಣ. ಲಾಕ್‌ಡೌನ್ ಸಡಿಲಿಕೆ ಹಾಗೂ ಹೊರ ರಾಜ್ಯದ ಜನರು, ಕಾರ್ಮಿಕರನ್ನು ರಾಜ್ಯಕ್ಕೆ ಕರೆತರುವ ಪ್ರಕ್ರಿಯೆ ಆರಂಭವಾದ ಬೆನ್ನಲ್ಲೇ ನಿರೀಕ್ಷೆಯಂತೆ ಸೋಂಕಿತರ ಸಂಖ್ಯೆಯಲ್ಲೂ ಏರಿಕೆ ಕಂಡುಬಂದಿದೆ. ಜೂನ್ ಹಾಗೂ ಜುಲೈನಲ್ಲಿ ಸೋಂಕಿತ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗಬಹುದೆಂದು ಮೊದಲೇ ಲೆಕ್ಕಾಚಾರ ಹಾಕಿದ್ದರಿಂದಾಗಿ ಪರಿಸ್ಥಿತಿ ನಿಯಂತ್ರಣಕ್ಕೆ ಬರುವ ವಿಶ್ವಾಸ ಜೀವಂತವಾಗಿದೆ.

ರಾಜ್ಯದಲ್ಲಿ ಒಟ್ಟಾರೆ ಮೃತರ ಸಂಖ್ಯೆ 40ಕ್ಕೆ ಏರಿದರೆ, ಸೋಂಕಿತರ ಸಂಖ್ಯೆ 1395ಕ್ಕೆ ತಲುಪಿದೆ. ಆ ಮೂಲಕ ರಾಜ್ಯ ಡೇಂಜರ್ ಜೋನ್‌ನತ್ತ ವಾಲುತ್ತಿರುವುದು ಸ್ಪಷ್ಟವಾಗಿದೆ.

**ಮುಂಬೈ ನಂಟು ಅಧಿಕ:** ಮಂಗಳವಾರ ಬೆಳಕಿಗೆ ಬಂದ 140 ಸೋಂಕಿತ ಪ್ರಕರಣಗಳಲ್ಲಿ 113 ಮಂದಿ ಹೊರ ರಾಜ್ಯಗಳ ಪ್ರಯಾಣ ಹಿನ್ನಲೆ ಹೊಂದಿದವರಾಗಿದ್ದಾರೆ. ಈ ಪೈಕಿ ಬಹುತೇಕರು ಮುಂಬೈನಿಂದ ಬಂದವರಾಗಿದ್ದು, ಇವರಲ್ಲಿ 25ಕ್ಕೂ ಹೆಚ್ಚು ಮಕ್ಕಳು ಸೋಂಕಿಗೆ ಒಳಗಾಗಿದ್ದಾರೆ.

ಮಂಡ್ಯದಲ್ಲಿ ಅತಿಹೆಚ್ಚು 71 ಪ್ರಕರಣ ವರದಿಯಾದರೆ ದಾವಣಗೆರೆ 22, ಕಲಬುರಗಿ 13, ಶಿವಮೊಗ್ಗ 10, ಬೆಂಗಳೂರು 6, ಬಾಗಲಕೋಟೆ 5, ಚಿಕ್ಕಮಗಳೂರು 5, ಉತ್ತರ ಕನ್ನಡ 4, ಉಡುಪಿ 4, ಹಾಸನ 3, ವಿಜಯಪುರ, ಬೀದರ್, ಗದಗ, ಯಾದಗಿರಿ, ಚಿತ್ರದುರ್ಗ, ರಾಯಚೂರಿನಲ್ಲಿ ತಲಾ ಒಂದು ಪ್ರಕರಣ ವರದಿಯಾಗಿದೆ.

**ಮೂವರ ಸಾವು:** ಬಳ್ಳಾರಿ, ವಿಜಯಪುರ, ಬೆಂಗಳೂರು ನಗರದಲ್ಲಿ ತಲಾ ಒಬ್ಬರು ಕರೊನಾದಿಂದ ಮೃತಪಟ್ಟಿದ್ದಾರೆ. ಇದರೊಂದಿಗೆ ಮೃತರ ಸಂಖ್ಯೆ 40ಕ್ಕೆ ಏರಿಕೆಯಾಗಿದೆ. ಬಳ್ಳಾರಿ ಜಿಲ್ಲೆಯ ನಿವಾಸಿ 61 ವರ್ಷದ ಸೋಂಕಿತ ಬೆಂಗಳೂರಿಗೆ ಪ್ರಯಾಣ ಮಾಡಿರುವ ಹಿನ್ನೆಲೆ ಹೊಂದಿದ್ದು, ತೀವ್ರ ಉಸಿರಾಟದ ತೊಂದರೆಯಿಂದ ಚಿಕಿತ್ಸೆಗೆ ದಾಖಲಾಗಿದ್ದ ಇವರು ಕೆಲದಿನಗಳ ಹಿಂದಷ್ಟೇ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ವಿಜಯಪುರದ 65 ವರ್ಷದ ಸೋಂಕಿತ ನಾನಾ ಆರೋಗ್ಯ ಸಮಸ್ಯೆಯಿಂದ ಚಿಕಿತ್ಸೆಗೆ ದಾಖಲಾಗಿ, ಮೇ 18ರಂದು ಮೃತಪಟ್ಟಿದ್ದರು. ಇದೀಗ ವರದಿಯಲ್ಲಿ ಕರೊನಾ ಸೋಂಕು ದೃಢಪಟ್ಟಿದೆ. ಬೆಂಗಳೂರು ನಿವಾಸಿ 54 ವರ್ಷದ ವ್ಯಕ್ತಿ ಆರೋಗ್ಯ ಸಮಸ್ಯೆಯಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. » ಪುಟ 3



ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯಲ್ಲಿ ಕಂಡ ವಾಹನ ದಟ್ಟಣೆ.

## ಮಂಡ್ಯಕ್ಕೆ ಮುಂಬೈ ನಂಜು

» ಒಂದೇ ದಿನ 71 ಪ್ರಕರಣ

ಮಂಗಳವಾರ ಒಂದೇ ದಿನ 71 ಸೋಂಕು ಪ್ರಕರಣ ಬೆಳಕಿಗೆ ಬಂದ ಮಂಡ್ಯ ಜಿಲ್ಲೆ ಕರೊನಾಗೆ ತತ್ತರಿಸಿದೆ. ಈ ಕರೊನಾ ವ್ಯೂಹದ ಹಿಂದಿರುವ ಮುಂಬೈ ನಂಟು ದಿನಕಳೆದಂತೆ ವಿಸ್ತರಿಸುತ್ತಿದೆ. ಹಲವು ವರ್ಷಗಳಿಂದ ಮುಂಬೈನಲ್ಲೇ ನೆಲೆ ಕಂಡುಕೊಂಡಿದ್ದ ಕೆ.ಆರ್.ಪೇಟೆ ಹಾಗೂ ನಾಗಮಂಗಲ ತಾಲೂಕಿನ ಜನತೆ ಲಾಕ್‌ಡೌನ್ ಸಡಿಲಿಕೆ ಬಳಿಕ ಸಾವಿರಾರು ಸಂಖ್ಯೆಯಲ್ಲಿ ವಾಪಸ್ ಆಗುತ್ತಿದ್ದಾರೆ. ಕರೊನಾ ಪರೀಕ್ಷೆಗೆ ಒಳಪಡಿಸದೇ ಕಾರ್ಮಿಕರನ್ನು ಮಹಾರಾಷ್ಟ್ರ ಕಳಿಸುತ್ತಿರುವುದರಿಂದ ಇಲ್ಲಿನ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ.

## ಹೆಚ್ಚಳಕ್ಕೆ ಕಾರಣ?

- ಲಾಕ್‌ಡೌನ್ ಸಡಿಲಿಕೆ ಬಳಿಕ ರಾಜ್ಯಕ್ಕೆ ಆಗಮಿಸುವವರ ಸಂಖ್ಯೆ ಹೆಚ್ಚಳ
- ಪರೀಕ್ಷೆಗೊಳಪಡಿಸದೆ ಕರ್ನಾಟಕಕ್ಕೆ ರವಾನೆ
- ಪಾಸ್ ವಿತರಣೆ ಸರಳೀಕರಣ, ರೈಲು ಪ್ರಯಾಣಕ್ಕೆ ಅನುಮತಿ ನೀಡಿದ್ದು
- ಸಾಮುದಾಯಿಕ ಪರೀಕ್ಷೆ ಸಂಖ್ಯೆ ಏರಿಕೆ

## ಆತಂಕವಿಲ್ಲ ಏಕೆ?

- ಸಾಮುದಾಯಿಕ ಪರೀಕ್ಷೆ ಹೆಚ್ಚಿದ ಮೇಲೆ ಅವುಗಳಿಗೆ ತಕ್ಕಂತೆ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ
- ಲಾಕ್‌ಡೌನ್ ಸಡಿಲಿಕೆ, ರೈಲಿಗೆ ಅನುಮತಿ ಕೊಟ್ಟ ಬಳಿಕ ಮುಂಬೈ ಸೇರಿ ಹಲವೆಡೆಯಿಂದ ರಾಜ್ಯಕ್ಕೆ ಬರುವವರ ಸಂಖ್ಯೆ ಹೆಚ್ಚಳ
- ಬಹುತೇಕ ಹೊಸ ಕೇಸ್‌ಗಳಿಗೆ ಹೊರ ರಾಜ್ಯ ನಂಟಿದೆ
- 60 ಸಾವಿರ ಜನ ಕ್ವಾರಂಟೈನ್‌ಗೆ ಒಳಪಟ್ಟಿರುವುದರಿಂದ ಸಹಜವಾಗಿ ಸೋಂಕಿನ ಸಂಖ್ಯೆ ಇನ್ನಷ್ಟು ಹೆಚ್ಚಳವಾಗುವುದು ಪಕ್ಕಾ

## ಇನ್ನೆರಡೇ ಜಿಲ್ಲೆ ಗ್ರೀನ್

ಹಸಿರು ವಲಯದಲ್ಲಿದ್ದ ಚಿಕ್ಕಮಗಳೂರಿನ ಮೂಡಿಗೆರೆ, ತರೀಕೆರೆಯಲ್ಲಿ ತಲಾ 1, ಎನ್.ಆರ್.ಪುರದಲ್ಲಿ 3 ಕೇಸ್ ದೃಢಪಟ್ಟಿದೆ. ಇದರಿಂದಾಗಿ 28 ಜಿಲ್ಲೆಗಳಿಗೆ ಕರೊನಾ ಕಾಲಿಟ್ಟಂತಾಗಿದ್ದು, ರಾಮನಗರ, ಚಾಮರಾಜನಗರ ಯಾವುದೇ ಪ್ರಕರಣ ಇಲ್ಲದೆ ಗ್ರೀನ್ ಜೋನ್‌ನಲ್ಲಿವೆ.

## ಭಾರತಕ್ಕೆ 11ನೇ ಸ್ಥಾನ

ಜಾಗತಿಕವಾಗಿ 1 ಲಕ್ಷಕ್ಕೂ ಅಧಿಕ ಸೋಂಕು ಪ್ರಕರಣ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 11ನೇ ಸ್ಥಾನದಲ್ಲಿದೆ. ಮಂಗಳವಾರ 6,119 ಹೊಸ ಪ್ರಕರಣ ದೃಢಪಡುವುದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 1,06,446ಕ್ಕೆ ಏರಿಕೆಯಾಗಿದೆ. ಜತೆಗೆ 145 ಜನರ ಸಾವಿನೊಂದಿಗೆ ಮೃತರ ಸಂಖ್ಯೆ 3,301ಕ್ಕೆ ಏರಿದೆ. » ವಿವರ ಪುಟ 9

# ರಾಜ್ಯದಲ್ಲಿ ಕರೋನಾ ಸ್ಫೋಟ

ಮೊದಲನೇ ಪುಟದಿಂದ....

ಮಾ. 18ರಂದು ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದು, ನಂತರದಲ್ಲಿ ಸೋಂಕು ತಗುಲಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಒಟ್ಟು 8 ಜನರ ಸಾವನ್ನಪ್ಪಿದ್ದಾರೆ.

**60 ಸಾವಿರ ಜನ ಕ್ವಾರಂಟೈನ್:** ಹೊರ ದೇಶ ಹಾಗೂ ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ 60 ಸಾವಿರಕ್ಕೂ ಹೆಚ್ಚು ಮಂದಿ ಆಗಮಿಸಿದ್ದಾರೆ. ಎಲ್ಲರನ್ನೂ ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕ್ವಾರಂಟೈನ್ ಮಾಡಲಾಗಿದೆ. ಎಲ್ಲರ ಗಂಟಲ ದ್ರವ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿದೆ. ಕ್ವಾರಂಟೈನ್‌ಗೆ ಒಳಗಾದವರಿಗೆ 12 ದಿನಗಳ ಬಳಿಕ ಮತ್ತೊಮ್ಮೆ ಪರೀಕ್ಷೆ ನಡೆಸಿ ನೆಗೆಟಿವ್ ಬಂದವರನ್ನು ಮನೆಗೆ ಕಳುಹಿಸಲಾಗುತ್ತದೆ. ಮನೆಗೆ ಹೋದ ನಂತರ ಮತ್ತೆ 14 ದಿನ ಕ್ವಾರಂಟೈನ್‌ನಲ್ಲಿರಲು ಸೂಚಿಸಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

| | |
|---|---|
| 23,187 | ನಿಗಾದಲ್ಲಿರುವವರು |
| 1,51,663 | ಪರೀಕ್ಷಿಸಿದ ಮಾದರಿಗಳು |
| 1,49,566 | ನೆಗೆಟಿವ್ ವರದಿಗಳು |
| 1,395 | ಒಟ್ಟು ಸೋಂಕಿತರು |
| 40 | ಮೃತಪಟ್ಟವರು |
| 01 | ಆತ್ಮಹತ್ಯೆ |
| 543 | ಗುಣಮುಖರಾದವರು |
| 811 | ಚಿಕಿತ್ಸೆ ಪಡೆಯುತ್ತಿರುವವರು |
| 702 | ಬಾಕಿ ಇರುವ ವರದಿಗಳು |

**ನಿತ್ಯ 6 ಸಾವಿರ ಪರೀಕ್ಷೆ:** ರಾಜ್ಯದಲ್ಲಿ ಕರೊನಾ ವೈರಸ್ ತಪಾಸಣೆಗಾಗಿ 46 ಪ್ರಯೋಗಾಲಯ ಸ್ಥಾಪಿಸಲಾಗಿದ್ದು, ಅದರಲ್ಲಿ 28 ಸರ್ಕಾರಿ ಹಾಗೂ 16 ಖಾಸಗಿ ಪ್ರಯೋಗಾಲಯಗಳಾಗಿವೆ. ಆರಂಭದಲ್ಲಿ 500 ರಿಂದ ಸಾವಿರ ಜನರಿಗೆ ನಿತ್ಯ ಪರೀಕ್ಷೆ ಮಾಡಲಾಗುತ್ತಿತ್ತು. ರಾಜ್ಯದಲ್ಲಿ ಪ್ರಸ್ತುತ ಪ್ರತಿದಿನ 6 ಸಾವಿರಕ್ಕೂ ಹೆಚ್ಚು ಪರೀಕ್ಷೆ ಮಾಡಲಾಗುತ್ತಿದೆ. ಮಾಸಾಂತ್ಯದ ವೇಳೆಗೆ ಪರೀಕ್ಷಾ ಸಾಮರ್ಥ್ಯವನ್ನು ನಿತ್ಯ 10 ಸಾವಿರಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸಿದ್ಧತೆ ನಡೆಸುತ್ತಿದೆ.